# ಈ ಕಾಲದಲ್ಲಿ

1. ಮಾನವೇತರ ಜೀವರಾಶಿಗಳ ಹುಟ್ಟಡಗಿಸಿ
ವಿಶ್ವವನು ಬರಿಯ ಮಾನವರಿಂದ ತುಂಬಿ ಹಾಕಲೆಂದೇ
ಈ ವಿಶಾಲ ಪ್ರಪಂಚದ ಇಷ್ಟೆಲ್ಲ ಅದ್ಭುತ ಜೀವರಾಶಿಗಳನು
ಭಗವಂತ ಸೃಷ್ಟಿಸಿರುವನೇ???

2. ಕಾರುಗಳು, ಸ್ಕೂಟರುಗಳು, ಟ್ರಕ್ಕುಗಳಿಂದ
ತುಂಬಿರುವ ಹಾದಿಬೀದಿಗಳಲ್ಲಿ ಆಗಸದಿಂದ ಬಿದ್ದ
ಧೂಳಿನ ಕಣ ಭುವಿಯ ಮೇಲೆ ಬೀಳುವುದೇ ಈ ಕಾಲದಲ್ಲಿ?

3. ಮರಳುಗಾಡುಗಳು ಮರುಭೂಮಿಯಾಗಿಲ್ಲ ಈಗ
ಮಾನವರ ಭವನಗಳಿಂದ ತುಂಬಿವೆ, ಈ ಕಾಲದಲ್ಲಿ.

4. ಬಾವಿಯಲ್ಲಿ ನೀರಿದ್ದರೆ ಅದನ್ನು ಪಡೆಯಲು
ಪಾತಾಳ ಲೋಕಕ್ಕೆ ಹೋಗಬೇಕು ಈ ಕಾಲದಲ್ಲಿ.

5. ನಗರಗಳಲ್ಲಿ ಎಲ್ಲಿಂದ ಎಲ್ಲಿಗೇ ಹೋಗಬೇಕಾದರೂ
ಕನಿಷ್ಠ ಒಂದೂವರೆ ಗಂಟೆಯಾದರೂ ಬೇಕು ಈ ಕಾಲದಲ್ಲಿ.

6. ಮೀನು ಮತ್ತಿತರ ಜಲಚರ ಪ್ರಾಣಿಗಳಿಗೆ ಸಹಜ ಮರಣ ಬಲು ಅಪರೂಪ
ಅವು ಉಸಿರುಗಟ್ಟಿ ಅಸಹನೀಯ ವೇದನೆಯಿಂದ ಒದ್ದಾಡುತ್ತ
ಕ್ರೂರ ಮಾನವರ ಆಹಾರವಾಗಲು ಅಕಾಲಿಕ ಸಾವನ್ನಪ್ಪಬೇಕು ಈ ಕಾಲದಲ್ಲಿ.

7. ಆಕಳು, ಎಮ್ಮೆ, ಹಂದಿ, ಒಂಟೆ ಮತ್ತಿತರ ಪ್ರಾಣಿಗಳು
ನಮ್ಮಂತೆಯೇ ರಕ್ತ ಮಾಂಸಗಳಿರುವ ಪ್ರಾಣಿಗಳಲ್ಲವೇ?
ಹರ್ಷ, ನೋವು, ಮಾತೃವಾತ್ಸಲ್ಯ, ವೇದನೆ ಅವುಗಳಿಗಿಲ್ಲವೇ?
ಅವುಗಳು ಈಯುವ ಮರಿಗಳೆಲ್ಲ ಮಾನವರಿಗೇ ಸೇರಿವೆ ಈ ಕಾಲದಲ್ಲಿ.

8. ಈ ಸಮಸ್ತ ಜೀವರಾಶಿಗಳಿಗೆ ಸಹಜ ಮೈಥುನದ ಅವಕಾಶವೂ ಇಲ್ಲ
ಮಾನವರಿಂದಲೇ ಆಗುವುದು ಅವುಗಳಿಗೆ ಕೃತಕ ಗರ್ಭದಾನ ಈ ಕಾಲದಲ್ಲಿ.

9. ಈ ಮೃಗಗಳು ಮಿತಿಮೀರಿ ಬೆಳೆಯುತಿರುವ
ಮಾನವ ಜಾತಿಗೆ ಮಾಂಸ, ಹಾಲು, ಉಣ್ಣೆ, ಚರ್ಮಗಳನು
ವಿಶೇಷವಾಗಿ ತಯಾರಿಸುವ ಯಾಂತ್ರಿಕ ಜೀವಿಗಳು ಮಾತ್ರ -ಈ ಕಾಲದಲ್ಲಿ.

10. ಈ ಜೀವರಾಶಿಗಳ ಹಾಲಿನ ಉತ್ಪತ್ತಿ ಕಡಿಮೆಯಾಗುತ್ತಿದ್ದಂತೆಯೇ
ಮಾನವರ ಆಹಾರಕ್ಕಾಗಿ ಅವುಗಳ ಕಗ್ಗೊಲೆ ನಡೆಸಿ ಮುದಿತನದ
ಬಾಧೆಯಿಂದ ಸಂಪೂರ್ಣ ಮುಕ್ತಿ ಪ್ರದಾನಿಸಿದೆ ಮನುಕುಲ ಈ ಕಾಲದಲ್ಲಿ.

11. ಕೋಳಿ, ಬಾತು, ಟರ್ಕಿ ಮೊದಲಾದ ಪಕ್ಷಿಗಳಿಗೆ
ನಿಮಿರಿ ನಿಲ್ಲಲೂ ಸಾಕಷ್ಟು ಸ್ಥಳವಿಲ್ಲ; ಅವುಗಳ ಜೀವನಾವಧಿ ಅತ್ಯಲ್ಪ.
ಮೊಟ್ಟೆಯ ಉತ್ಪಾದನೆ ಕಡಿಮೆಯಾಗುತ್ತಿದ್ದಂತೆಯೇ
ಅವುಗಳ ಮಾಂಸ ಮಾನವರಿಗೆ ಆಹಾರವಾಗುವುದು ಈ ಕಾಲದಲ್ಲಿ.

12. ಹಿಂದೊಮ್ಮೆ ಸಮಸ್ತ ಪರ್ವತಗಳನ್ನು ಆವರಿಸಿಕೊಂಡಿದ್ದ ದಟ್ಟ ಅರಣ್ಯಗಳ ಸುಳಿವೇ ಈಗಿಲ್ಲ
ಮಾನವರ ಉಪಭೋಗಕ್ಕಾಗಿ ಅವುಗಳನು ಆಕ್ರಮಿಸಿಕೊಂಡಿವೆ
ಕಾಫಿ ಟೀ ಹಣ್ಣಿನ ತೋಟಗಳು ಈ ಕಾಲದಲ್ಲಿ.

13. ಭುವಿಯ ಮೇಲಿನ ನೆಲವೆಲ್ಲ ಮಾನವನ ಉಪಯೋಗಕ್ಕಾಗಿ ಮಾತ್ರ.
ಮಾನವರಿಗೆ ಪ್ರದರ್ಶಿಸಲೆಂದು ನಾವು ಸ್ಥಾಪಿಸಿರುವ ಮೃಗಾಲಯಗಳಲ್ಲಿ
ಮಾತ್ರವೇ ರಕ್ಷಣೆ ಇತರ ಜೀವರಾಶಿಗಳಿಗೆ ಈ ಕಾಲದಲ್ಲಿ.

14. ಸಪ್ತಸಮುದ್ರಗಳಲಿ ಸ್ವೇಚ್ಛೆಯಾಗಿ, ಹಾಯಾಗಿ ಗುಂಪಾಗಿ ವಿಹರಿಸುತ್ತಿದ್ದ ಸಾಧು ತಿಮಿಂಗಲಗಳು
ಮಾಂಸಕ್ಕಾಗಿ ಕೊಲ್ಲಲು ಮಾನವರು ಅವುಗಳ ಶರೀರವನ್ನು ಭೇದಿಸಿ ಸ್ಫೋಟಿಸುವ
ಈಟಿ ಕ್ಷಿಪಣಿಗಳನ್ನು ನಿರ್ಮಿಸಿದನಂತರ ಸರ್ವನಾಶದ ಅಂಚಿನಲ್ಲಿವೆ ಈ ಕಾಲದಲ್ಲಿ.

15. ನದಿಗಳೆಲ್ಲ ಸಂಗಮಗೊಳ್ಳುತ್ತಿದ್ದವು ಸಾಗರದಲ್ಲಿ ಒಂದಾನೊಂದು ಕಾಲದಲ್ಲಿ
ಅವುಗಳ ನೀರು ಸಂಗ್ರಹಿಸಲ್ಪಡುತ್ತದೆ ಮಾನವನ ಉಪಯೋಗಕ್ಕಾಗಿ
ನಿರ್ಮಿಸಲಾದ ಜಲಾಶಯಗಳಲ್ಲಿ ಈ ಕಾಲದಲ್ಲಿ.

16. ಹಲವು ರಾಷ್ಟ್ರಗಳಲ್ಲಿ ದಿನನಿತ್ಯದ ಬಳಕೆಗೆ ಬೇಕಾದ ನೀರನ್ನು
ರಾಸಾಯನಿಕ ಇಂಧನಗಳನ್ನು ಬಳಸಿ ಸಾಗರದ ನೀರನ್ನು
ಅಪಲವಣೀಕರಿಸಿ ತಯಾರಿಸುತ್ತಾರೆ ಈ ಕಾಲದಲ್ಲಿ.

17. ರಾಜನೀತಿಜ್ಞರ ಧೋರಣೆಯಂತೆ ಮಿತಿ ಬೇಕಿಲ್ಲ ಮಾನವರ ಜನಸಂಖ್ಯಾ ಸ್ಫೋಟಕ್ಕೆ.
ಆದರೆ ಜಿರಾಫೆ, ಆನೆ, ಕಾಡೆಮ್ಮೆಗಳಂಥ ಕೆಲವು ಮೃಗಗಳ ಸಂಖ್ಯೆಯನ್ನು ಹತೋಟಿಯಲ್ಲಿಡಲು
ಅವುಗಳನ್ನು ಗುಂಡಿಟ್ಟು ಕೊಲ್ಲಲಾಗುತ್ತದೆ ಈ ಕಾಲದಲ್ಲಿ.

18. "ಅಷ್ಟಪುತ್ರ ಸೌಭಾಗ್ಯರಸ್ತು", "ಮೊಮ್ಮಕ್ಕಳನ್ನು ಬೇಗ ಹೆತ್ತು ಕೊಡಿ"
ನೂತನ ವಧೂವರರಿಗೆ ಹೀಗೆಂದು ಆಶೀರ್ವದಿಸುವುದು ಉಚಿತವೇ ಈ ಕಾಲದಲ್ಲಿ?
ಮಕ್ಕಳಾಗದಂತೆ, ಒಂದೇ ಮಗು ಸಾಕೆಂದು ಸಂತಾನ ನಿಯಂತ್ರಣ ಮಾಡುವ ದಂಪತಿಗಳೆಲ್ಲರಿಗೆ
ವಿಲಪಿಸುತ್ತಿರುವ ಭೂಮಾತೆಯ ಪರವಾಗಿ ಅಭಿನಂದನೆಗಳು!

Kannada translation of
Dr. Katta Murty's " I kAlaMlO"
by Shashikala Raja